ದಿನಾಂಕ 22-7-2017 ರಂದು ಬೆಳಿಗ್ಗೆ 11.00 ಗಂಟೆಗೆ ಕುಲಪತಿಗಳವರ ಸಭಾಂಗಣ, ಕೃವಿವಿ ರಾಯಚೂರಿನಲ್ಲಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ಮೂವತ್ತೊಂದನೇಯ ಸಭೆಯ ನಡುವಳಿಗಳು:

ಉಪಸ್ಥಿತರಿದ್ದ ಸದಸ್ಯರು:

| | | |
|---|---|---|
| 1. | ಡಾ. ಪಿ.ಎಂ. ಸಾಲಿಮಠ | ಅಧ್ಯಕ್ಷರು |
| 2. | ಶ್ರೀ ರಾಜಶೇಖರ ಬಸವರಾಜ ಪಾಟೀಲ | ಸದಸ್ಯರು |
| 3. | ಡಾ. ಎಂ. ಶೇಖರಗೌಡ | ಸದಸ್ಯರು |
| 4. | ಶ್ರೀಮತಿ ಹೇಮಾವತಿ ಲಂಕೇಶ | ಸದಸ್ಯರು |
| 5. | ಶ್ರೀ ಅಮರೇಶ ಬಲ್ಲಿದವ | ಸದಸ್ಯರು |
| 6. | ಶ್ರೀ ಸಿದ್ದಪ್ಪ ಭಂಡಾರಿ | ಸದಸ್ಯರು |
| 7. | ಶ್ರೀ ವೀರನಗೌಡ ಪರಸರೆಡ್ಡಿ | ಸದಸ್ಯರು |
| 8. | ಡಾ. ಎಂ.ಬಿ. ಚೆಟ್ಟಿ | ಸದಸ್ಯರು |
| 9. | ಡಾ. ಡಿ.ಎಂ. ಚಂದರಗಿ | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಮೂವತ್ತೊಂದನೇಯ ಸಭೆಗೆ ಸರ್ವಸದಸ್ಯರನ್ನು ಹಾಗೂ ಹೊಸದಾಗಿ ನಾಮನಿರ್ದೇಶನಗೊಂಡ ಸದಸ್ಯರಾದ ಶ್ರೀ ರಾಜಶೇಖರ ಬಸವರಾಜ ಪಾಟೀಲ, ಶಾಸಕರು ಮತ್ತು ಐ.ಸಿ.ಎ.ಆರ್.ನಿಂದ ನಾಮನಿರ್ದೇಶಿತರಾದ ಡಾ. ಎಂ.ಬಿ. ಚೆಟ್ಟಿ ಅವರುಗಳನ್ನು ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರವರು ಸ್ವಾಗತ ಕೋರಿದರು. ತದನಂತರ, ಕಾರ್ಯಸೂಚಿಯ ಪ್ರಕಾರ ಚರ್ಚಿಸಿ, ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

| | |
|---|---|
| ಐಟಂ-1 | **ದಿನಾಂಕ 5-4-2017 ಹಾಗೂ 21-4-2017 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂಭತ್ತನೇಯ ಹಾಗೂ ಮೂವತ್ತನೇಯ (ತುರ್ತು ಸಭೆ) ಸಭೆಗಳ ನಡುವಳಿಗಳನ್ನು ಸ್ಥಿರೀಕರಿಸುವುದು**<br><br>**ಠರಾವು:**<br>ದಿನಾಂಕ 5-4-2017 ಹಾಗೂ 21-4-2017 ರಂದು ಅನುಕ್ರಮವಾಗಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂಭತ್ತನೇಯ ಸಭೆಯ ಹಾಗೂ ಮೂವತ್ತನೇಯ (ತುರ್ತು ಸಭೆಯ) ಸಭೆಯ ನಡುವಳಿಗಳನ್ನು ಓದಲಾಯಿತೆಂದು ಪರಿಗಣಿಸಿ, ಸ್ಥಿರೀಕರಿಸಲಾಯಿತು.<br>**(ಕ್ರಮ: ಕುಲಸಚಿವರು)** |
| ಐಟಂ-2 | **ದಿನಾಂಕ 5-4-2017 ಹಾಗೂ 21-4-2017 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂಭತ್ತನೇಯ ಹಾಗೂ ಮೂವತ್ತನೇಯ (ತುರ್ತು ಸಭೆ) ಸಭೆಗಳ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡುವುದು**<br><br>**ಠರಾವು:**<br>ದಿನಾಂಕ 5-4-2017 ಹಾಗೂ 21-4-2017 ರಂದು ಅನುಕ್ರಮವಾಗಿ ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಇಪ್ಪತ್ತೊಂಭತ್ತನೇಯ ಸಭೆಯ ಹಾಗೂ ಮೂವತ್ತನೇಯ (ತುರ್ತು ಸಭೆಯ) ಸಭೆಯ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳಿಗೆ ಅನುಮೋದನೆ ನೀಡಿತು.<br><br>ಮುಂದುವರೆದು, ಇಪ್ಪತ್ತೆಂಟನೇಯ ಸಭೆಯ ಅನುಕ್ರಮ ಸಂ. 13 ರ ಪ್ರಕಾರ ಸಿಬ್ಬಂದಿಯವರಿಗೆ ವೈದ್ಯಕೀಯ ವೆಚ್ಚವನ್ನು ಹಿಂತಿರುಗಿ ಪಡೆಯಲು ಆಸ್ಪತ್ರೆಗೆ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಯಿತು ಹಾಗೂ ವಿಶ್ವವಿದ್ಯಾಲಯದ ವೈದ್ಯಾಧಿಕಾರಿಯವರನ್ನು ಒಬ್ಬ ಸದಸ್ಯರನ್ನಾಗಿ ಸೇರಿಸಿ ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಲು ಸಲಹೆ ನೀಡಲಾಯಿತು.<br>**(ಕ್ರಮ: ಕುಲಸಚಿವರು)** |

| | |
|---|---|
| | ಮುಂದುವರೆದು, ಇಪ್ಪತ್ತೊಂಭತ್ತನೇಯ ಸಭೆಯ ಅನುಕ್ರಮ ಸಂ. 9 ರ ಪ್ರಕಾರ ವ್ಯವಸ್ಥಾಪನಾ ಮಂಡಳಿಯ ಅಧಿಕಾರೇತರ ಸದಸ್ಯರುಗಳಿಗೆ ನೀಡಲಾಗುವ ತುಟ್ಟಿ ಭತ್ಯೆ, ದಿನಭತ್ಯೆ ಹಾಗೂ ಆಸನ ಶುಲ್ಕವನ್ನು ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಯಿತು ಹಾಗೂ ಅಧಿಸೂಚನೆ ಸಂ: ಸಾಉಇ 21 ಎಂಇಎ 2017 ದಿನಾಂಕ 17–4–2017 ರ ಅನುಸಾರ ಕರ್ನಾಟಕ ಸರಕಾರ ಸ್ವಾಮ್ಯದ ಸಾರ್ವಜನಿಕೆ ಉದ್ದಿಮೆಗಳ ಇಲಾಖೆಯ ವಿವಿಧ ಮಂಡಳಿಗಳ ನಾಮನಿರ್ದೇಶಿತ ಸದಸ್ಯರುಗಳಿಗೆ ಆಸೀನ ಶುಲ್ಕವನ್ನು ಹೆಚ್ಚಿಸಿದ್ದನ್ನು ಸರಕಾರದ ಗಮನಕ್ಕೆ ತಂದು ಅದೇ ರೀತಿ ಆಸೀನ ಶುಲ್ಕವನ್ನು ರೂ. 3000/– ಗಳಿಗೆ ಹೆಚ್ಚಿಸಲು ಅನುಮೋದನೆ ನೀಡಲಾಯಿತು.<br>(ಕ್ರಮ: ಕುಲಸಚಿವರು)<br><br>ಮುಂದುವರೆದು, ಮೂವತ್ತನೇಯ (ತುರ್ತು ಸಭೆಯ) ಸಭೆಯ ಹೆಚ್ಚುವರಿ ಅನುಕ್ರಮ ಸಂ. 2 ಕ್ಕೆ ಸಬಂಧಿಸಿದಂತೆ, ಚಾಲ್ತಿಯಲ್ಲಿರುವ ನೇಮಕಾತಿ ಪ್ರಕ್ರಿಯೆಯನ್ನು ದಿನಾಂಕ 4–8–2017 ರ ಬದಲಾಗಿ ಆಗಸ್ಟ್ 2017 ರ ಅಂತ್ಯದೊಳಗೆ ಪೂರ್ಣಗೊಳಿಸಲು ಅನುಮೋದನೆ ನೀಡಲಾಯಿತು. |
| ಐಟಂ–3 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡಿ ಸ್ಥಿರೀಕರಿಸುವ ಕುರಿತು.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಟೆಂಡರ್ ಸಂ. EE/EO/UASR/TN-89/2016-17 ದಿನಾಂಕ 16–3–2017 ರ ಪ್ರಕಾರ ಜಾಹಿರುಗೊಳಿಸಿದ ಕಾಮಗಾರಿಗಳನ್ನು ದಿನಾಂಕ 21–7–2017 ಜರುಗಿದ ಕಾಮಗಾರಿ ಸಮಿತಿ ಸಭೆಯಲ್ಲಿ ಅನುಮೋದನೆ ನೀಡಿದ್ದು, ಸದರಿ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br>**(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು)** |
| ಐಟಂ–4 | **ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಅನುಮೋದನೆ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಈ ಕೆಳಕಂಡ ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು: |

| Sl. No. | Name of the item | Qty. | Amount (Rs.) |
|---|---|---|---|
| 1 | Fully Automated Programmed Fibre Analyser | 1 | 10,00,000.00 |
| 2 | Fully Automatic Computer Controlled Pneumatic Fat Extraction System | 1 | 12,00,000.00 |
| 3 | Elements Detection Sensor for Scanning Electron Microscopy (SEM) | 1 | 35,00,000.00 |
| 4 | Atomic Force Microscopy | 1 | 70,00,000.00 |
| 5 | Freez Dryer | 1 | 10,00,000.00 |
| 6 | Mass Spectrophotometer | 1 | 40,00,000.00 |
| 7 | Atomic Absorption Spectro-photometer | 3 | 48,00,000.00 |
| 8 | Duel Touch Screen N analyzer | 4 | 22,00,000.00 |
| 9 | Quartz Double Distillation Unit of 10 lts Cap | 5 | 20,00,000.00 |
| 10 | Microwave Digester | 2 | 30,00,000.00 |
| | **Total** | | **2,97,00,000.00** |

**(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು/ ಸರಕು ಖರೀದಿ ಅಧಿಕಾರಿ)**

| | |
|---|---|
| ಐಟಂ–5 | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸಿಬ್ಬಂದಿಯವರು ರೂ. 25,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಮರುಪಾವತಿಯ ಬಿಲ್ಲುಗಳಿಗೆ ಅನುಮೋದನೆ ನೀಡುವ ಕುರಿತು.** |

ಠರಾವು:

ಚರ್ಚೆಯ ನಂತರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ರಾಯಚೂರು ಅವರು ಪರಿಶೀಲಿಸಿ ಮೇಲುರುಜು ಮಾಡಿದಂತೆ ವೈದ್ಯಕೀಯ ವೆಚ್ಚದ ಮರುಪಾವತಿಗಾಗಿ ಘನ ವೇದಿಕೆಯು ಈ ಕೆಳಗಿನಂತೆ ಅನುಮೋದನೆ ನೀಡಿತು

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ರವಿಕುಮಾರ,ಹಿರಿಯ ಸಹಾಯಕರು, | 65,429/– |
| 2 | ಶ್ರೀ. ಹನುಮೇಶ, ಕ್ಷೇತ್ರ ಸಹಾಯಕರು, | 64,838/– |
| 3 | ಶ್ರೀಮತಿ.ಕೆ. ಗಂಗಮ್ಮ, ಕೃಷಿ ಕಾರ್ಮಿಕಳು, | 97,540/– |
| 4 | ಶ್ರೀ. ಶರಣಯ್ಯ .ಎಸ್. ಕೋರಿ, ಸೀನಿಯರ್ ಕೇರಟೇಕರ್, | 83,673/– |

ಚರ್ಚೆಯ ನಂತರ, ಸರಕಾರದಿಂದ ಮತ್ತು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಆಸ್ಪತ್ರೆಗಳನ್ನು ಹೊರತುಪಡಿಸಿ ಇತರೇ ಆಸ್ಪತ್ರೆಗಳಲ್ಲಿ ತುರ್ತು ಸಂದರ್ಭಗಳಲ್ಲಿ ಚಿಕಿತ್ಸೆ ಪಡೆದ ಸಿಬ್ಬಂದಿಯವರ ವೈದ್ಯಕೀಯ ವೆಚ್ಚದ ಬಿಲ್ಲುಗಳಿಗೆ ಮರುಪಾವತಿಗಾಗಿ ಸಹ ಘನ ವೇದಿಕೆಯು ಈ ಕೆಳಗಿನಂತೆ ಅನುಮೋದನೆ ನೀಡಿತು

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ಮುಖೇಶ ಕುಮಾರ ಮೀನಾ, | 15,224/– |
| 2 | ಡಾ. ಶರಣಗೌಡ ಹಿರೇಗೌಡ, | 45,177/– |
| 3 | ಶ್ರೀ. ಈರಣ್ಣ. ಜಿ, | 22,973/– |

(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು))

**ಐಟಂ–6** **ಸಿ.ಎ.ಎಸ್.2006 ಯೋಜನೆಯಡಿ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕರ (ಎ.ಜಿ.ಪಿ ರೂ.6000 ರಿಂದ ರೂ.7000 ಮತ್ತು ರೂ.7000 ರಿಂದ ರೂ.8000 ಅಡಿ) ಪದೋನ್ನತಿ ಕುರಿತು.**

ಠರಾವು:

ಸಿ.ಎ.ಎಸ್.–2006 ಅಡಿ ಎ.ಜಿ.ಪಿ. ರೂ. 6000 ರಿಂದ ಎ.ಜಿ.ಪಿ. ರೂ. 7000 ಕ್ಕೆ (4 ಶಿಕ್ಷಕರುಗಳಿಗೆ) ಹಾಗೂ ಎ.ಜಿ.ಪಿ. ರೂ. 7000 ರಿಂದ ಎ.ಜಿ.ಪಿ. ರೂ. 8000 ಕ್ಕೆ (1 ಶಿಕ್ಷಕರಿಗೆ) ಯಾದಿಯಲ್ಲಿ ನಮೂದಿಸಿರುವಂತೆ ಅರ್ಹ ಶಿಕ್ಷಕರುಗಳಿಗೆ ಅವರುಗಳು ಅರ್ಹತೆ ಹೊಂದಿದ ದಿನಾಂಕದಿಂದ ಅನ್ವಯವಾಗುವಂತೆ ಮುಂಬಡ್ತಿ ಆದೇಶಗಳನ್ನು ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು.

(ಕ್ರಮ: ಕುಲಸಚಿವರು)

**ಐಟಂ–7** **ಡಾ. ಸಿ.ಟಿ. ರಾಮಚಂದ್ರ, ಸಹಾಯಕ ಪ್ರಾಧ್ಯಾಪಕರು (ಸಂಸ್ಕರಣೆ ಹಾಗೂ ಆಹಾರ ತಂತ್ರಜ್ಞಾನ), ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು ಇವರು ಸಲ್ಲಿಸಿದ ರಾಜಿನಾಮೆಯನ್ನು ಅಂಗೀಕರಿಸುವ ಕುರಿತು.**

ಠರಾವು:

ವಿವರವಾದ ಚರ್ಚೆಯ ನಂತರ, ಡಾ. ಸಿ.ಟಿ. ರಾಮಚಂದ್ರ ಇವರು ಸಲ್ಲಿಸಿದ ರಾಜಿನಾಮೆಯನ್ನು ನಿಯಮಾನುಸಾರ ಅಂಗೀಕರಿಸಿದ್ದನ್ನು ಘನ ವೇದಿಕೆಯು ಸರ್ವಾನುಮತದಿಂದ ಅನುಮೋದನೆ ನೀಡಿ ಕೈಗೊಂಡ ಕ್ರಮವನ್ನು ಸ್ಥಿರೀಕರಿಸಿತು. (ಕ್ರಮ: ಕುಲಸಚಿವರು)

**ಐಟಂ–8** **ಶ್ರೀ ಶಂಕರ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ವಿದ್ಯುತ್) ಇವರು ವಯೋನಿವೃತ್ತಿ ಹೊಂದಿದ ನಂತರ ಕೃವಿವಿ ರಾಯಚೂರಿನಲ್ಲಿ ಗುತ್ತಿಗೆ ಆಧಾರದ ಮೇಲೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ (ವಿದ್ಯುತ್) ಎಂದು ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡುವ ಕುರಿತು.**

ಠರಾವು:

| | |
|---|---|
| | ವಿಸ್ತೃತ ಚರ್ಚೆಯ ನಂತರ, ದಿನಾಂಕ 31–7–2017 ರಂದು ನಿವೃತ್ತಿ ಹೊಂದಲಿರುವ ಶ್ರೀ ಶಂಕರ ಅವರನ್ನು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ (ವಿದ್ಯುತ್) ಎಂದು ದಿನಾಂಕ 2–8–2017 ರಿಂದ ಜಾರಿಗೆ ಬರುವಂತೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ (ವಿದ್ಯುತ್) ಎಂದು ಗುತ್ತಿಗೆ ಆದಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಪ್ರಸ್ತಾಪಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಕಾರ್ಯಸೂಚಿಯ ಕನ್ನಡ ಭಾಷಾಂತರದಲ್ಲಿ ನಿವೃತ್ತಿ ಹೊಂದಲಿದ್ದಾರೆ ಎಂಬುದರ ಬದಲಾಗಿ ನಿವೃತ್ತಿ ಹೊಂದಿರುತ್ತಾರೆ ಎಂದು ನಮೂದಿಸಿರುವುದನ್ನು ಗಮನಕ್ಕೆ ತಂದಿರುತ್ತಾರೆ. ಈ ತರಹದ ತಪ್ಪುಗಳಾಗದಂತೆ ಎಚ್ಚರವಹಿಸಲಾಗುವುದು. (ಕ್ರಮ: ಕುಲಸಚಿವರು) |
| **ಐಟಂ–9** | **ಕೃಷಿ ವಿಶ್ವವಿದ್ಯಾಲಯದ ಸಿಬ್ಬಂದಿಯವರಿಗೆ ವಿಮಾನಯಾನ ಪ್ರಯಾಣ ಮಾಡಲು ಹಾಗೂ ಅದಕ್ಕೆ ತಗಲುವ ಪ್ರಯಾಣ ಭತ್ಯೆಯನ್ನು ಕ್ಲೇಮು ಮಾಡಲು ಅನುಮೋದನೆ ನೀಡುವ–ಕುರಿತು.**<br><br>**ಠರಾವು:**<br>ವಿವರವಾದ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯದ ಸಿಬ್ಬಂದಿಯವರಿಗೆ ಅಂತರ ರಾಷ್ಟ್ರೀಯ ಕಾರ್ಯಾಗಾರ / ವಿಶ್ವವಿದ್ಯಾಲಯದ ಕೆಲಸಗಳಿಗಾಗಿ ವಿಶೇಷ ಸಂದರ್ಭಗಳಲ್ಲಿ ಮಾನ್ಯ ಕುಲಪತಿಗಳವರ ನಿರ್ಧಿಷ್ಟ ಆದೇಶದ ಮೇರೆಗೆ ವಾಯುಯಾನ ಮೂಲಕ ಪ್ರಯಾಣ ಕೈಗೊಳ್ಳುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. (ಕ್ರಮ: ಕುಲಸಚಿವರು) |
| **ಐಟಂ–10** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಭಾರತ ದೇಶದ ಒಳಗೆ (ಉತ್ತರ ಭಾರತ) ಹಾಗೂ ದೇಶದ ಹೊರಗೆ (ಇಸ್ರಾಯೀಲ್) ವಿವಿಧ ಹೈ–ಟೆಕ್‌ಕೃಷಿ ಸಂಸ್ಥೆಗಳಿಗೆ ಭೇಟಿ ನೀಡುವ ಕುರಿತು.**<br><br>**ಠರಾವು:**<br>ಚರ್ಚೆಯ ನಂತರ, ಪ್ರಥಮ ಹಂತದಲ್ಲಿ ಭಾರತ ದೇಶದ ಒಳಗೆ ಉತ್ತರ ಭಾರತದಲ್ಲಿಯ ಅಭಿವೃದ್ಧಿಪಡಿಸಿದ್ದನ್ನು ಅಧ್ಯಯನ ಮಾಡಲು 8–10 ದಿನಗಳ ಪ್ರವಾಸವನ್ನು ಆಗಸ್ಟ್–2017 ರ ಅಂತ್ಯದಲ್ಲಿ ಹಾಗೂ ಡಾ. ಎಂ.ಬಿ. ಚೆಟ್ಟಿ, ಅಸಿಸ್ಟಂಟ್ ಡೈರೆಕ್ಟರ್ ಜನರಲ್ (ಹೆಚ್.ಆರ್.ಡಿ.), ಐ.ಸಿ.ಎ.ಆರ್. ನವದೆಹಲಿ ಅವರ ಸಲಹೆಯಂತೆ ಪ್ರವಾಸ ಕಾರ್ಯಕ್ರಮವನ್ನು ಏರ್ಪಡಿಸಲು ಘನ ವೇದಿಕೆಯು ಅನುಮೋದನೆ ನೀಡಿತು. ಮುಂದುವರೆದು, ಇಸ್ರಾಯೀಲ್ ದೇಶಕ್ಕೆ ಪ್ರವಾಸ ಕೈಗೊಳ್ಳುವ ಸಲುವಾಗಿ ಪ್ರಸ್ತಾವನೆಯನ್ನು ಸರಕಾರದ ಅನುಮೋದನೆಗೆ ಸಲ್ಲಿಸಲಾಗುವುದು. (ಕ್ರಮ: ಕುಲಸಚಿವರು) |
| | **ಹೆಚ್ಚುವರಿ ಕಾರ್ಯಸೂಚಿ ವಿಷಯಗಳು.** |
| **ಐಟಂ–1** | **ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕ ಸಿಬ್ಬಂದಿಯರನ್ನು ತಮ್ಮ ಮೂಲ ಹುದ್ದೆಯನ್ನು ಲೀನ್ ನಲ್ಲಿಟ್ಟು ಕೃವಿವಿ ಧಾರವಾಡಕ್ಕೆ ಎರವಲು ನೀಡಲು ಅನುಮೋದನೆ ಕುರಿತು**<br><br>**ಠರಾವು:**<br>ಹಿರಿಯ ಪ್ರಾಧ್ಯಾಪಕರುಗಳಾದ ಡಾ. ಡಿ.ಎಂ. ಚಂದರಗಿ, ಡಾ. ಬಿ.ಎಂ. ಚಿತ್ತಾಪುರ ಹಾಗೂ ಡಾ. ಎ.ಎಸ್. ಹಳೆಪ್ಯಾಟಿ ಇವರುಗಳನ್ನು ಕೃವಿವಿ ಧಾರವಾಡಕ್ಕೆ ಎರವಲು ನೀಡುವ ವಿಷಯವನ್ನು ಮಾನ್ಯ ಕುಲಪತಿಗಳವರು ತೀರ್ಮಾನ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅಧಿಕಾರ ನೀಡಿತು.<br>(ಕ್ರಮ: ಕುಲಸಚಿವರು) |
| **ಐಟಂ–2** | **ಡಾ: ಶಿವಶಂಕರ, ಪ್ರಾಧ್ಯಾಪಕರು (ಮೀನುಗಾರಿಕೆ), ಕೃಷಿ ಮಹಾವಿದ್ಯಾಲಯ, ಭೀ'ಗುಡಿ ಇವರಿಗೆ ಸಂಬಂಧಿಸಿದಂತೆ ಸಿ.ಎ.ಎಸ್.–2006 ನಿಯಮಾವಳಿಗಳಡಿ ಸಹ ಪ್ರಾಧ್ಯಾಪಕರು ಎ.ಜಿ.ಪಿ. ರೂ. 9000 ರಿಂದ ಪ್ರಾಧ್ಯಾಪಕರು ರೂ. 10000 ಕ್ಕೆ ಪದೋನ್ನತಿಗಾಗಿ ಪ್ರಕಟಣೆಗಳನ್ನು ಮರುಪರಿಶೀಲಿಸಲು ಅನುಮೋದನೆ ಕುರಿತು.**<br><br>**ಠರಾವು:** |

| | |
|---|---|
| | ಚರ್ಚೆಯ ನಂತರ, ಕಾರ್ಯಕ್ರಮ ಸಂಯೋಜಕರಾಗಿ ಕೃಷಿ ಹಾಗೂ ಕೃಷಿಗೆ ಸಂಬಂಧಿತ ಇತರೇ ವಿಷಯಗಳ ಪ್ರಕಟಣೆಗಳನ್ನು ಹೊಂದಿರಬಹುದು, ಹೀಗಾಗಿ ಡಾ: ಶಿವಶಂಕರ, ಪ್ರಾಧ್ಯಾಪಕರು (ಮೀನುಗಾರಿಕೆ), ಕೃಷಿ ಮಹಾವಿದ್ಯಾಲಯ, ಭೀ'ಗುಡಿ ಇವರಿಗೆ 2012 ರಿಂದ ಅನ್ವಯವಾಗುವಂತೆ ಸಿ.ಎ.ಎಸ್.-2006 ನಿಯಮಾವಳಿಗಳಡಿ ಪದೋನ್ನತಿಗಾಗಿ ಮರುಪರಿಶೀಲಿಸಿದ ನಂತರ ಸೂಕ್ತ ಆದೇಶ ನೀಡಲು ಘನ ವೇದಿಕೆಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು) |
| ಐಟಂ–3<br><br>ಐಟಂ–4<br><br>ಐಟಂ–5 | ಕೃಷಿ ಸಂಶೋಧನಾ ಕೇಂದ್ರ, ಚಿತ್ತಾಪುರ, ಕಲಬುರಗಿ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿರುವ ಕೇಂದ್ರಕ್ಕೆ ಸಿಬ್ಬಂದಿ ಒದಗಿಸಲು ಅನುಮೋದನೆ ನೀಡುವ ಬಗ್ಗೆ<br><br>ನೂತನ ಕೃಷಿ ಸಂಶೋಧನಾ ಕೇಂದ್ರ, ಗುಳದಳ್ಳಿ, ಕೊಪ್ಪಳ ಜಿಲ್ಲೆಯಲ್ಲಿ ಸ್ಥಾಪನೆಗೊಂಡಿರುವ ಕೇಂದ್ರಕ್ಕೆ ಸಿಬ್ಬಂದಿ ಒದಗಿಸಲು ಅನುಮೋದನೆ ನೀಡುವ ಬಗ್ಗೆ.<br><br>ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ನ್ಯಾನೋ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರವನ್ನು ಬಲಪಡಿಸಲು ಅನುಮೋದನೆ ನೀಡುವ ಬಗ್ಗೆ.<br><br>ಠರಾವು:<br>ವಿವರವಾದ ಚರ್ಚೆಯ ನಂತರ, ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಬದಲಾಗಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಪುನರ್–ನಿಯೋಜನೆ ಮಾಡುವುದರೊಂದಿಗೆ ಕೃಷಿ ಸಂಶೋಧನಾ ಕೇಂದ್ರ, ಚಿತ್ತಾಪುರ, ಅಖಿಲ ಭಾರತ ಒಣಬೇಸಾಯ ಸಂಶೋಧನಾ ಪ್ರಾಯೋಜನೆಗಾಗಿ ನೂತನ ಕೃಷಿ ಸಂಶೋಧನಾ ಕೇಂದ್ರ, ಗುಳದಳ್ಳಿ, ಕೊಪ್ಪಳ ಹಾಗೂ ಕೃವಿವಿ ರಾಯಚೂರಿನ ನ್ಯಾನೋ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರವನ್ನು ಬಲಪಡಿಸಲು ಘನ ವೇದಿಕೆಯು ಅನುಮೋದನೆ ನೀಡಿತು.<br>(ಕ್ರಮ: ಸಂಶೋಧನಾ ನಿರ್ದೇಶಕರು /ಕುಲಸಚಿವರು) |
| ಐಟಂ–6<br><br>ಐಟಂ–10<br><br>ಐಟಂ–11 | ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಹವಾಮಾನ ವೈಪರೀತ್ಯ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಅನುಮೋದನೆ ನೀಡುವ ಬಗ್ಗೆ.<br><br>ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಕೀಟನಾಶಕ ಪಳೆಯುಳಿಕೆ ಪರೀಕ್ಷಾ ಕೇಂದ್ರ / ಪ್ರಯೋಗಾಲಯ ಸ್ಥಾಪಿಸಲು ಅನುಮೋದನೆ ನೀಡುವ ಬಗ್ಗೆ.<br><br>ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ನೂತನ ಸೂಕ್ಷ್ಮಜೀವಶಾಸ್ತ್ರ ಪ್ರಯೋಗಾಲಯ ಸ್ಥಾಪಿಸಲು ಅನುಮೋದನೆ ನೀಡುವ ಬಗ್ಗೆ<br><br>ಠರಾವು:<br>ವಿವರವಾದ ಚರ್ಚೆಯ ನಂತರ, ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಬದಲಾಗಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಕೆಲವೊಂದು ಹುದ್ದೆಗಳನ್ನು ಪುನರ್–ನಿಯೋಜನೆ ಮಾಡುವುದರೊಂದಿಗೆ ಹವಾಮಾನ ವೈಪರೀತ್ಯ ಅಧ್ಯಯನ ಕೇಂದ್ರ, ಕೀಟನಾಶಕ ಪಳೆಯುಳಿಕೆ ಪರೀಕ್ಷಾ ಕೇಂದ್ರ / ಪ್ರಯೋಗಾಲಯ ಹಾಗೂ ನೂತನ ಸೂಕ್ಷ್ಮಜೀವಶಾಸ್ತ್ರ ಪ್ರಯೋಗಾಲಯ ಸ್ಥಾಪಿಸಲು ಘನ ವೇದಿಕೆಯು ಅನುಮೋದನೆ ನೀಡಿತು. ಸದರಿ ಪ್ರಸ್ತಾವನೆಯನ್ನು ದಿನಾಂಕ 15–7–2017 ರಂದು ಜರುಗಿದ ಸಂಶೋಧನಾ ಪರಿಷತ್ತಿನ ಎರಡನೇ ಸಭೆಯಲ್ಲಿ ಅಂಗೀಕರಿಸಿ ಘನ ವೇದಿಕೆಗೆ ಸಲ್ಲಿಸಲು ಶಿಫಾರಸ್ಸು ಮಾಡಿರುತ್ತದೆ.<br>(ಕ್ರಮ: ಸಂಶೋಧನಾ ನಿರ್ದೇಶಕರು /ಕುಲಸಚಿವರು) |
| ಐಟಂ–7 | ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ರೈತರ ಸಹಭಾಗಿತ್ವದಲ್ಲಿ ಸಂಸ್ಥೆಗಳ (ಗುತ್ತಿಗೆದಾರರ) ಮುಖಾಂತರ ಬೀಜೋತ್ಪಾದನೆ ಕೈಗೊಳ್ಳಲು ಅನುಮೋದನೆ ನೀಡುವ ಬಗ್ಗೆ.<br><br>ಠರಾವು:<br>ಚರ್ಚೆಯ ನಂತರ, ರೈತರ ಆದಾಯವನ್ನು ಹೆಚ್ಚಿಸುವ ಸಲುವಾಗಿ ಹೈಬ್ರಿಡ್ ಬೀಜಗಳ ಉತ್ಪಾದನೆಗೆ |

| | |
|---|---|
| | ಖರೀದಿ ಬೆಲೆಯ ಶೇ.10 ರಷ್ಟು ಮತ್ತು ಇನ್ನುಳಿದ ತಳಿಗಳಿಗೆ ಶೇ. 5 ರಷ್ಟು ಕಮೀಷನ್ ನೀಡುವುದರೊಂದಿಗೆ ರೈತರ ಸಹಭಾಗಿತ್ವದಲ್ಲಿ ಸಂಸ್ಥೆಗಳ (ಗುತ್ತಿಗೆದಾರರ) ಮುಖಾಂತರ ಬೀಜೋತ್ಪಾದನೆ ಕೈಗೊಳ್ಳಲು ಘನ ವೇದಿಕೆಯು ಅನುಮೋದನೆ ನೀಡಿತು. **(ಕ್ರಮ: ಸಂಶೋಧನಾ ನಿರ್ದೇಶಕರು /ವಿಶೇಷಾಧಿಕಾರಿ (ಬೀಜ))** |
| ಐಟಂ–8 | **ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಉತ್ಪಾದನೆಯಾದ ಬೀಜಗಳನ್ನು ಖಾಸಗಿ ಬೀಜ ವ್ಯಾಪಾರಸ್ಥರ ಮೂಲಕ ಮಾರಾಟ ಮಾಡಲು ಅನುಮೋದನೆ ನೀಡುವ ಬಗ್ಗೆ.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಉತ್ಪಾದನೆಯಾದ ಬೀಜಗಳನ್ನು ವಿಶ್ವವಿದ್ಯಾಲಯವು ನಿಗದಿಪಡಿಸಿದ ದರ ಹಾಗೂ ಬೀಜ ವ್ಯಾಪಾರಸ್ಥರಿಗೆ ನೀಡಬೇಕಾದ ಕಮಿಷನ್ ದರವನ್ನು ನಿಗದಿಪಡಿಸಿ ದಿನಾಂಕ 15–7–2017 ರಂದು ಜರುಗಿದ ಸಂಶೋಧನಾ ಪರಿಷತ್ತಿನ ಎರಡನೇ ಸಭೆಯಲ್ಲಿ ಅಂಗೀಕರಿಸಿದಂತೆ ಖಾಸಗಿ ಬೀಜ ವ್ಯಾಪಾರಸ್ಥರ ಮೂಲಕ ಮಾರಾಟ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು **(ಕ್ರಮ: ಸಂಶೋಧನಾ ನಿರ್ದೇಶಕರು /ವಿಶೇಷಾಧಿಕಾರಿ (ಬೀಜ))** |
| ಐಟಂ–9 | **ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ವಲಯ–1 ರ ಸಹ ಸಂಶೋಧನಾ ನಿರ್ದೇಶಕರ ಹೆಚ್ಚುವರಿ ಸ್ಥಾನ ಮಂಜೂರಾತಿಗಾಗಿ ಅನುಮೋದನೆ ನೀಡುವ ಬಗ್ಗೆ.**<br><br>**ಠರಾವು:**<br>ದೀರ್ಘ ಚರ್ಚೆಯ ನಂತರ, ಹೊಸದಾಗಿ ಹುದ್ದೆಗಳನ್ನು ಸೃಜಿಸುವ ಬದಲಾಗಿ ವಿಶ್ವವಿದ್ಯಾಲಯದಲ್ಲಿ ಮಂಜೂರಾದ ಹುದ್ದೆಗಳೊಂದಿಗೆ ಬೀದರ್ ಮತ್ತು ಕಲಬುರಗಿ ಜಿಲ್ಲೆಗಳನ್ನೊಳಗೊಂಡ ಸಹ–ಸಂಶೋಧನಾ ನಿರ್ದೇಶಕರ ವಲಯ–1 ರ ಹುದ್ದೆಯನ್ನು ಕಲಬುರಗಿಯಲ್ಲಿ ಹೊಂದಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಮಾನ್ಯ ಸದಸ್ಯರಾದ ಡಾ. ಎಂ. ಶೇಖರಗೌಡ ಅವರು ಸಹ–ವಿಸ್ತರಣಾ ನಿರ್ದೇಶಕರ ಹುದ್ದೆಯನ್ನು ಕೊಪ್ಪಳದಲ್ಲಿ ಹೊಂದಲು ಸಹ ಸಲಹೆ ನೀಡಿದರು.:<br>**(ಕ್ರಮ: ಸಂಶೋಧನಾ ನಿರ್ದೇಶಕರು /ಕುಲಸಚಿವರು)** |
| ಐಟಂ–12 | **ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರಿನಲ್ಲಿ ನೂತನ ಎನ್.ಎಮ್.ಆರ್. ಘಟಕವನ್ನು ಖರೀದಿಸಲು ಅನುಮೋದನೆ ನೀಡುವ ಬಗ್ಗೆ**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ವಿವಿಧ ಎಣ್ಣೆಕಾಳು ಬೆಳೆಗಳಲ್ಲಿ ಸಂಶೋಧನೆಗಾಗಿ ಸಂಶೋಧನಾ ನಿರ್ದೇಶಕರ ನಿಧಿಯಿಂದ (Ab.Ac.No. 6005/701) ದಿನಾಂಕ 15–7–2017 ರಂದು ಜರುಗಿದ ಸಂಶೋಧನಾ ಪರಿಷತ್ತಿನ ಎರಡನೇ ಸಭೆಯಲ್ಲಿ ಅಂಗೀಕರಿಸಿದಂತೆ ಮುಖ್ಯ ಕೃಷಿ ಸಂಶೋಧನಾ ಕೇಂದ್ರ, ರಾಯಚೂರಿನಲ್ಲಿ ನೂತನ ಎನ್.ಎಮ್.ಆರ್. ಘಟಕವನ್ನು ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. **(ಕ್ರಮ: ಸಂಶೋಧನಾ ನಿರ್ದೇಶಕರು /ಕುಲಸಚಿವರು)** |

31

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /- 26–7–2017 | ಸಹಿ /- 26–7–2017 |
|---|---|
| **(ಪಿ.ಎಂ. ಸಾಲಿಮಠ)**<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | **(ಡಿ.ಎಂ. ಚಂದರಗಿ)**<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

**(ಡಿ.ಎಂ. ಚಂದರಗಿ)**
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.